

# ಪಾದರಸದ ಕಾರಂಜಿ



ಸಾಮಾನ್ಯವಾಗಿ ಕಾರಂಜಿ ಎಂದೊಡನೆ ಕಣ್ಮುಂದೆ ಕಾಣಬರುವುದು ಚಿಮ್ಮುವ ನೀರು. ಆದರೆ ಇಲ್ಲಿನ ಕಾರಂಜಿ ತೊಟ್ಟಿಯಲ್ಲಿ ಕಾಣುತ್ತಿರುವುದು ನೀರಲ್ಲ, ಬದಲಾಗಿ ದ್ರವರೂಪದ ಲೋಹ ಪಾದರಸ! ಇದು ಅತ್ಯಂತ ಸುಂದರ ಹಾಗೂ ಹೊಳೆಯುವ ಚೆಲುವುಳ್ಳ ಲೋಹ; ಆದರೆ ಅಷ್ಟೇ ವಿಷಕಾರಿಯೂ ಹೌದು. (ಪಾದರಸವನ್ನು ಕ್ವಿಕ್ ಸಿಲ್ವರ್ ಎಂದೂ ಕರೆಯುತ್ತಾರೆ.)

ಹಲವು ವರ್ಷಗಳ ಹಿಂದೆ ಸ್ಪೇನ್ ದೇಶದ ಆಲೆಡನ್, ಜಗತ್ತಿನಲ್ಲೇ ಅತಿ ಹೆಚ್ಚು ಪಾದರಸ ಉತ್ಪಾದಿಸುವ ಸ್ಥಳವಾಗಿತ್ತು. ಇಲ್ಲಿನ ಗಣಿಗಳಿಂದ ಸುಮಾರು 2,50,000 ಮೆಟ್ರಿಕ್ ಟನ್‌ಗಳಷ್ಟು ಪಾದರಸವನ್ನು ತೆಗೆಯಲಾಗಿದೆ. ಅಪರಾಧಿಗಳು ಹಾಗೂ ಜೀತದಾಳುಗಳೇ ಈ ಗಣಿಗಳಲ್ಲಿ ಕೆಲಸ ಮಾಡುತ್ತಿದ್ದು, ಅವರಲ್ಲಿ ಬಹಳಷ್ಟು ಜನರು ಪಾದರಸದ ವಿಷದಿಂದ ಮೃತಪಟ್ಟಿದ್ದರು.

ಈ ಗಣಿಯ ಸ್ಮಾರಕವನ್ನು ನಿರ್ಮಿಸಲು ಸ್ಪೇನ್ ದೇಶವು, ಅಲೆಗ್ಸಾಂಡರ್ ಕಾಲ್ಡರ್ ಎಂಬ ಅಮೆರಿಕನ್ ಶಿಲ್ಪಿಯನ್ನು ನಿಯೋಜಿಸಿತ್ತು. ಈತ ಅತಿ ಸುಂದರವಾದ ಕಾರಂಜಿಯೊಂದನ್ನು ನಿರ್ಮಿಸಿದ. ಈ ಕಾರಂಜಿಯಲ್ಲಿ ನೀರಿನ ಬದಲಾಗಿ ಶುದ್ಧ ಪಾದರಸವು ಪಂಪ್ ಆಗುತ್ತದೆ!

1937ರಲ್ಲಿ ಪ್ಯಾರಿಸ್‌ನಲ್ಲಿ ನಡೆದ ವರ್ಲ್ಡ್ ಫೇರ್‌ನ ಪ್ರವೇಶದ್ವಾರದಲ್ಲಿ ಈ ಕಾರಂಜಿಯನ್ನು ಪ್ರದರ್ಶಿಸಲಾಗಿತ್ತು. ಇಂದಿಗೂ ಕೂಡ ಇದು ಬಾರ್ಸಿಲೋನಾದ ಫನ್ಡಾಸಿಯೊ ಜೊನ್ ಮೈರೊ ಎಂಬಲ್ಲಿ ಶುದ್ಧ ಪಾದರಸವನ್ನು ಪಂಪ್ ಮಾಡುತ್ತಿದೆ. ಅತ್ಯಂತ ಅಪಾಯಕಾರಿಯಾದ ಈ ಕಾರಂಜಿಯನ್ನು ಜನರು ಮುಟ್ಟದಂತೆ ಗಾಜಿನ ಮನೆಯಲ್ಲಿ ಸಂರಕ್ಷಿಸಿ ಇಡಲಾಗಿದೆ.

–ವಿದ್ಯಾ